ಮಾಡುತ್ತಿರುವ ಲಿಯು ಫಾನ್ ಎನ್ನುವ ದಾದಿಯ ಅನುಭವ ಎಂಥವರ ಮನಸ್ಸನ್ನೂ ಆರ್ದ್ರಗೊಳಿಸುತ್ತದೆ.

''ಕೋವಿಡ್ ಸೋಂಕು ಶಂಕಿತರೆಂದು ಗೊತ್ತಾದ ಕೂಡಲೇ ಆ ವ್ಯಕ್ತಿ ಇತರರ ಸಂಪರ್ಕದಿಂದ ವಂಚಿತನಾಗುತ್ತಾನೆ. ಸೋಂಕಿತರಿಗೆ ಕ್ವಾರಂಟೈನ್ ಅವಧಿಯಲ್ಲಿ ಪ್ರತ್ಯೇಕ ವಾಸ ಕಡ್ಡಾಯ. ಸೋಂಕು ದೃಢಪಟ್ಟರೆ ಪ್ರತ್ಯೇಕ ಚಿಕಿತ್ಸೆ. ತಲೆನೇವರಿಸುವ ಬಂಧುಗಳಿಲ್ಲ. ಅಂಗೈಯನ್ನು ಅದುಮಿ ಸಾಂತ್ವನ ಹೇಳುವ ಆಪ್ತರಿಲ್ಲ. ಬೆನ್ನು ತಟ್ಟಿ 'ಹುಶಾರಾಗ್ತಿ ಬಿಡು' ಎಂದು ಸಮಾಧಾನ ಮಾಡುವ ಪ್ರೀತಿ ಪಾತ್ರರಿಲ್ಲ. ಮೈತುಂಬಾ ರಕ್ಷಾ ಕವಚ ಹಾಕಿಕೊಂಡು ಬರುವ ವೈದ್ಯರು ಚಿಕಿತ್ಸೆಯ ಮಾರ್ಗದರ್ಶನ ನೀಡಿ ಗಡಿಬಿಡಿಯಲ್ಲಿ ಹೋಗುತ್ತಾರೆ. ಅವರ ಪ್ರಿಸ್ಕ್ರಿಪ್ಷನ್ ಪ್ರಕಾರ ಔಷಧಿಗಳನ್ನು ಕೊಡುವುದು ನನ್ನಂತಹ ದಾದಿಯರ ಕೆಲಸ. ರೋಗಿಯು ಬಯಸುವ ವ್ಯಕ್ತಿಯ ಮೊಬೈಲ್ ನಂಬರ್ ಡಯಲ್ ಮಾಡಿ ವಿಡಿಯೊ ಕಾಲ್ ಮಾಡುವುದು, ಒಂದೆರಡು ಸಾಂತ್ವನದ ಮಾತು ಹೇಳುವುದು ಶುಶ್ರೂಷೆಯ ಭಾಗವೇ ಆಗಿದೆ. ಎಷ್ಟೋ ಸಂದರ್ಭಗಳಲ್ಲಿ ರೋಗಿಯ ಕೊನೆಯ ಕಾಲ್ ಅನ್ನು ಡಯಲ್ ಮಾಡಿ ಅವರ ತುಟಿಗಳ ಮುಂದೆ ಮೊಬೈಲ್ ಹಿಡಿದಿದ್ದೇನೆ. ರೋಗಿಯು ಸಾವನ್ನಪ್ಪುವ ಪರಿಸ್ಥಿತಿ ಎದುರಾದಾಗ, ಅವರಿಗೆ ಲಭ್ಯವಾಗುವ ಕೊನೆಯ ಮಾನವ ಸ್ಪರ್ಶ, ಆ ವಾರ್ಡ್‌ನ ಶುಶ್ರೂಷಕಿಯದ್ದೇ ಆಗಿರುತ್ತದೆ. ಇಂತಹ ನೂರಾರು ಪ್ರಕರಣಗಳು ವಾರ್ಡ್‌ನಲ್ಲಿ ನಡೆಯುತ್ತಿರುತ್ತದೆ. ಕೊರೊನಾ ಸೋಂಕು ಹೆಚ್ಚು ಹರಡಿದಂತೆ ಆಸ್ಪತ್ರೆ ವಾರ್ಡ್‌ಗಳಲ್ಲಿ ರೋಗಿಗಳ ಸಂಖ್ಯೆ ಹೆಚ್ಚುತ್ತದೆ. ಆ ಸಂದರ್ಭದಲ್ಲಿ ನರ್ಸ್‌ಗಳ ಮೇಲೆ ಎಷ್ಟು ಒತ್ತಡ



ಕೋವಿಡ್ 19 ಸೋಂಕಿನಿಂದ ಚೇತರಿಸಿಕೊಂಡು ಕರ್ತವ್ಯಕ್ಕೆ ಮರಳುತ್ತಿರುವ ಕೇರಳದ ದಾದಿ ರೇಷ್ಮಾ ಮೋಹನ್‌ದಾಸ್



